**ಆರ್ . ಎ. ನಂಃ 04/2019**

**ಪಿ.ಡಬ್ಲ್ಯೂಃ 1 , ನವಾಬ ಸಾಬ**

**ದಿನಾಂಕ :15-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.**

**ಪಾಟಿ ಸವಾಲು :- ಶ್ರೀ . ಎಎಸ್ ಎನ್. ಜೆ. ವಕೀಲರಿಂದ :**

ನಾನು ಶಹಾಬಾದನಲ್ಲಿ ವಾಸ ಇರುತ್ತೇನೆ. ಹುಟ್ಟಿನಿಂದ ಅಲ್ಲಿಯೇ ವಾಸ ಇದ್ದೇನೆ. ದಾವೆಯನ್ನು ನಾನು ಒಬ್ಬನೇ ಹಾಕಿದ್ದೆ. ಖಾಸಿಮ ಸಾಬ ನನ್ನ ಅಣ್ಣನ ಮಗ ಎಂದು ಹೇಳುತ್ತಾರೆ. ನಾನು ಕೆಳಗಿನ ನ್ಯಾಯಾಲಯದಲ್ಲಿ ದಾವೆ ಹಾಕಿದಾಗಿನಿಂದ ತೀರ್ಪು ಆಗುವರೆಗೂ ನ್ಯಾಯಾಲಯದಲ್ಲಿ ಹಾಜರು ಇರುತ್ತಿದ್ದೆ. ನಾವು ವಕೀಲರನ್ನು ನೇಮಿಸಿದ್ದು, ಅವರನ್ನು ನಮ್ಮ ಪ್ರಕರಣ ಏನು ಆಯಿತು, ಎಲ್ಲಿಗೆ ಬಂದಿತು ಎಂದು ವಿಚಾರಿಸುತ್ತಿದ್ದೆ ಎಂದು ಸೂಚಿಸುವುದು ಸರಿ. ಸದರಿ ದಾವೆಯಲ್ಲಿ ತಿರ್ಪು ಆಗಿ 6 ತಿಂಗಳುಗಳ ನಂತರ ಈ ಮೇಲ್ಮನವಿ ಸಲ್ಲಿಸಿದ್ದೇವೆ ಎಂದೂ ಸೂಚಿಸುವುದು ಸರಿ. ಕೆಳಗಿನ ನ್ಯಾಯಾಲಯದಲ್ಲಿ ದಿ: 13-08-2018 ರಲ್ಲಿ ತೀರ್ಪು ಆಗಿತ್ತು ಎಂದು ಸೂಚಿಸುವುದು ಸರಿ. ಸದರಿ ತೀರ್ಪಿನ ಪ್ರತಿಯನ್ನು ಪಡೆಯಲು ದಿ: 24-08-2018 ರಂದು ಅರ್ಜಿಯನ್ನು ಸಲ್ಲಿಸಿದ್ದು ಅದೇ ದಿನ ಕಾಫಿ ನೀಡಿರುವ ಬಗ್ಗೆ ದೃಡಿಕೃತ ನಕಲಿನಲ್ಲಿ ಉಲ್ಲೇಖ ಇದೆ ಎಂದು ಸೂಚಿಸುವುದು ಸರಿ.

ಅಪೀಲು ಹಾಕಲು ತಡ ಏಕೆ ಆಯಿತು ಎಂದು ಏನು ಕಾರಣ ಬರೆಸಿದ್ದೇನೆ ಎಂದು ನನಗೆ ಗೊತ್ತಿಲ್ಲಾ. ಅದರ ವಿವರಣೆಯನ್ನು ನನಗೆ ವಕೀಲರು ಓದಿ ಹೇಳಿಲ್ಲಾ. ನಾನು ಈಗ ಬೇರೆಯವರ ಹತ್ತಿರ ದುಡಿಮೆ ಮಾಡುತ್ತಿದ್ದೇನೆ. ನಾನು ಒಕ್ಕಲುತನ ಮಾಡುತ್ತಿದ್ದೆ, ಗಳೆ ಹೊಡೆಯುತ್ತಿದ್ದೆ ಎಂದು ವಕೀಲರಿಗೆ ಹೇಳಿ ಬರೆಸಿಲ್ಲಾ. ದಾವೆಯಲ್ಲಿ ಆದ ತೀರ್ಪಿನ ಬಗ್ಗೆ ನಮ್ಮ ಎಲ್ಲಾ ಮೇಲ್ಮನವಿದಾರರಿಗೆ ಮಾಹಿತಿ ಇದ್ದರೂ ಸಹ ಅದೂ ಗೊತ್ತಿರಲಿಲ್ಲಾ ಎಂದು ಸುಳ್ಳು ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ನಾನು ಕೇವಲ 130 ದಿನಗಳ ತಡವಾಗಿದೆ ಎಂದು ಸುಳ್ಳು ಹೇಳಿದ್ದು, 6 ತಿಂಗಳಿಗೂ ಹೆಚ್ಚು ಕಾಲ ತಡವಾಗಿದೆ ಎಂದರೆ ಸರಿಯಲ್ಲ. 2018 ರಲ್ಲಿ ಬೆಳೆ ಎಲ್ಲಾ ಚೆನ್ನಾಗಿ ಬಂದಿತ್ತು ಎಂದರೆ ಸಾಕ್ಷಿ ಬೆಳೆ ಬಂದಿಲ್ಲಾ ಎಂದು ಹೇಳುತ್ತಾರೆ. ತೀರ್ಪು ಆದ ನಂತರ ತೀರ್ಪಿನ ಪ್ರತಿಯನ್ನು ಸಕಾಲದಲ್ಲಿ ಕೊಟ್ಟಿದ್ದು, ಅದು ನನಗೆ ಗೊತ್ತಿದ್ದರೂ ಸಹ ತಡವಾಗಿದ್ದಕ್ಕೆ ಸಬೂಬು ಹೇಳಲು ಈರೀತಿಯಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂಧರೆ ಸರಿಯಲ್ಲ. ನಾನು ಹೇಳಿರುವ ಕಾರಣಗಳು ಆಧಾರ

ರಹಿತವಾಗಿದ್ದು ಎಂದು ಸೂಚಿಸುವುದು ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
**ಚಿತ್ತಾಪೂರ.**